ಅಪ್ಪನ ನಿರಂತರ ಬೈಗುಳ ಕೂಗಾಟ, ರೇಗಾಟಗಳಿಂದ ಬದುಕೇ ಸಾಕಾಗಿ ಹೋಗಿತ್ತು. ಇನ್ನು ಹೆತ್ತಮ್ಮನಾದರೂ ಪ್ರೀತಿ ತೋರಬೇಡವೇ? ಅಪ್ಪನಿಗಿಂತ ಅವಳಿಗೇ ನಮ್ಮ ಮೇಲೆ ತಾತ್ಸಾರ ಜಾಸ್ತಿ. 'ಕುಮಾತಾ ನ ಭವತಿ' ಎಂದಿದ್ದ ಶಂಕರಾಚಾರ್ಯರು ನಮ್ಮ ಅಮ್ಮನನ್ನು ನೋಡಬೇಕಿತ್ತು. ಅಪ್ಪನ ಜಿಪುಣತನದಿಂದಾಗಿ ಹೊಟ್ಟೆ, ಬಟ್ಟೆ, ಸ್ಕೂಲ್, ಫೀಸು ಇಷ್ಟನ್ನು ಬಿಟ್ಟು ಏನೂ ಇರಲಿಲ್ಲ.

ದೊಡ್ಡವಳು ಸುಮಕ್ಕ ಜಾಣೆ. ಎಸ್‌ಎಸ್‌ಎಲ್ಸಿಯಲ್ಲಿ ಶಾಲೆಗೆ ಅವಳೇ ಫಸ್ಟ್ ಬಂದಿದ್ದಳು. ಕಾಲೇಜ್ ಸೇರಲು ತುದಿಗಾಲಲ್ಲಿ ನಿಂತಿದ್ದ ಅವಳಿಗೆ 'ಓದಿದ್ದು ಸಾಕು' ಎಂದ ಅಪ್ಪ ಅವಳಿಚ್ಛೆಗೆ ವಿರುದ್ಧವಾಗಿ ತಮ್ಮ ಭಾವಮೈದುನ ರಾಜಶೇಖರನಿಗೆ ಮದುವೆ ಮಾಡಿಕೊಟ್ಟಿದ್ದರು. ರಾಜಶೇಖರ ಮಾವ ಶ್ರೀಮಂತ. ಅವನು ಮೊದಲು ಲಗ್ನವಾಗಿ ಹತ್ತು ವರ್ಷವಾದರೂ ಮಕ್ಕಳಾಗದೇ ಅತ್ತೆ-ಮಾವನ ಕಾಟಕ್ಕೆ ಬೇಸತ್ತು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಳು. ಹಾಗಾಗಿ ಮೂವತ್ತಾರರ ರಾಜಶೇಖರ ಮಾವನಿಗೆ ಹದಿನೇಳರ ಸುಮಕ್ಕ ಎರಡನೇ ಹೆಂಡತಿ. ಮುಂದೆ ಓದುವ ಆಸೆಯಿದ್ದ ಸುಮಕ್ಕ ಗಂಡನ ಮನೆ ಸೇರಿದವಳು ತೀರ ಅನಿವಾರ್ಯದ ಹೊರತು ತವರಿಗೆ ಬರಲಿಲ್ಲ. ಅವಳ ಮೂರು ಹೆರಿಗೆಗಳೂ ಗಂಡನ ಮನೆಯಲ್ಲೇ ಆದವು. ರಾಜಶೇಖರ ಮಾವ ಮಾತ್ರ, 'ನನಗೆ ಹೆಣ್ಣು ಕೊಟ್ಟರು. ನನ್ನ ವಂಶೋದ್ಧಾರವಾಯಿತು' ಎಂಬ ಕೃತಜ್ಞತೆಗೆ ಅತೀ ವಿನಯವಾಗಿ ಇವರು ಕರೆದಾಗೆಲ್ಲ ಬಂದು ರಾಮನ ಭಂಟ ಹನುಮಂತನಂತೆ ಇವರ ಆಜ್ಞೆ ಪಾಲಿಸುತ್ತಿದ್ದ.

ಇನ್ನು ಲೀಲಕ್ಕ, ಜಯಕ್ಕ ಬಿ.ಎ. ಮುಗಿಸಿದ್ದರು ನೋಡಲು ಅಷ್ಟೇನೂ ಚಂದವಿಲ್ಲದ ಅವರಿಬ್ಬರೂ ಮದುವೆಯಾದೊಡನೆ ಗಂಡನಮನೆ ಸೇರಿ ತವರಿಂದ ದೂರವೇ ಉಳಿದಿದ್ದರು. ನಾವು ನಾಲ್ವರಲ್ಲಿ ಚಂದವಿದ್ದವಳು ನಾನೇ. ನನ್ನ ನಂತರ ನಾಲ್ಕು ವರ್ಷ ಬಿಟ್ಟು ಹುಟ್ಟಿದ ವಂಶೋದ್ಧಾರಕ ಜಗದೀಶನನ್ನು ಅತೀ ಪ್ರೀತಿಯಿಂದ ಬೆಳೆಸಿದ್ದರು. ಅವರ ಅತೀ ಮುದ್ದಿನಿಂದ ಬೆಳೆದ ಜಗದೀಶ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಎರಡು ವರ್ಷವಿದ್ದವ ಅಮೆರಿಕಕ್ಕೆ ಹಾರಿ, ಅಲ್ಲಿನ ಸಹೋದ್ಯೋಗಿ ಅಮೃತಾ ಕೌರ್‌ಳನ್ನು ಮದುವೆಯಾಗಿ ಕ್ಯಾಲಿಫೋರ್ನಿಯಾದಲ್ಲೇ ಸೆಟಲ್ ಆಗಿಬಿಟ್ಟ. ಮೊದಮೊದಲು ಅವನು ಕಳಿಸುತ್ತಿದ್ದ ಕಾಣಿಕೆ, ಡಾಲರ್‌ಗಳಲ್ಲಿ ಅವನ ಗಳಿಕೆ ಬಗ್ಗೆ ಹಿಗ್ಗಿದ್ದ ಅಪ್ಪ, ಅಮ್ಮ ನಂತರ ಅವನಿಗಾಗಿ ಹಂಬಲಿಸಿ ಒದ್ದಾಡತೊಡಗಿದರು. ಅವನು ವಾಪಸ್ ಬರಲಿಲ್ಲ. ಹೌದು. ಅವರಲ್ಲೀಗ ಹಣ, ಆಸ್ತಿ ಇದೆ. ಅಮ್ಮ ಮನೆ ನಡೆಸಲಾಗದಷ್ಟು ಸೋತಿದ್ದಾಳೆ. ಅವಳಿಗೆ ಬಿ.ಪಿ, ಶುಗರ್ ಇದೆ. ಅಪ್ಪನೇ ಗಟ್ಟಿ ಇದ್ದರು. ಈಗ ಹೃದಯದ ಬೈಪಾಸ್ ಸರ್ಜರಿ ಆಗಿ ಮಲಗಿದ್ದಾರೆ.

ನನ್ನ ಬಿಎಸ್ಸಿ ಡಿಗ್ರಿ ಮುಗಿಯುತ್ತಿದ್ದಂತೇ ಅಪ್ಪನ ಪರಿಚಿತರು ಹೇಳಿದ್ದರಂತೆ. 'ಹುಡುಗ ಸಾಫ್ಟ್‌ವೇರ್ ಎಂಜಿನಿಯರ್. ಬೆಂಗ್ಳೂರಲ್ಲಿ ಕೆಲಸದಲ್ಲಿದ್ದಾನೆ. ನಿಮ್ಮ ಮಗಳು ಮೈತ್ರಿಯನ್ನು ಮದುವೆ ಒಂದರಲ್ಲಿ ನೋಡಿ ಮೆಚ್ಚಿದ್ದಾನಂತೆ' ನನ್ನನ್ನು ಯಾರೂ ಒಂದು ಮಾತೂ ಕೇಳಲಿಲ್ಲ. ಮದುವೆಯಾಗಿ ಬೆಂಗಳೂರು ಸೇರಿದ್ದೆ. ಹೆಣ್ಣುಮಕ್ಕಳೆಂದರೆ ತಾತ್ಸಾರವಿದ್ದ ಮನೆಯಿಂದ ಹೊರಬಂದೆ. ಆದರೆ ಬಾಣಲೆಯಿಂದ ಬೆಂಕಿಗೆ ಬಿದ್ದಿದ್ದೆ. ಮೊದಮೊದಲು ಗಂಡ ವಿಶ್ವನಾಥ ನನ್ನೊಂದಿಗೆ ಚೆನ್ನಾಗೇ ಇದ್ದ. ನಂತರ ಅವನಿಗೆ ಅನುಮಾನದ ಪಿಶಾಚಿ ಮೆಟ್ಟಿಕೊಂಡಿತ್ತು. ನಾನು ಅಲಂಕಾರ ಮಾಡಿಕೊಂಡರೆ ಯಾವ್ಯೋನನ್ನು ಮೆಚ್ಚಿಸಲು ಓಡಾಡ್ತಿದ್ದೀ ಅಂದ. ಯಾರೊಡನೆ ಮಾತಾಡಿದರೂ ಅತೀ ಅಸಹನೆ ತೋರುತ್ತಿದ್ದ. ಬೈಗುಳ, ಹೊಡೆತ ಆರಂಭವಾದವು. ಕೆಲಸಕ್ಕೆ ಸೇರ್ತೀನಿ ಅಂದೆ. 'ನೀವು ಹೆಣ್ಣುಮುಂಡೇರು ಹೊರಗೆ ಕಳಿಸಿದರೆ ಯಾರೊಡನೆಯೋ ಓಡಿಹೋಗ್ತೀರಿ' ಅಂದ. ನಾನು ಗರ್ಭಿಣಿಯಾದಾಗಲಂತೂ 'ಯಾರಿಗೆ ಬಸಿರಾಗಿದ್ದೀ?' ಎಂದು ಹಂಗಿಸಿ ಮಾತಾಡಿದ. ನನಗೇ ಸಾಕಾಗಿ ಹೋಗಿತ್ತು. ನಾನು ಬೇಡವಾದರೆ ಡೈವೋರ್ಸ್ ಕೊಡು ಅಂದಿದ್ದೇ ತಡ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದ.

ಅವನೊಡನೆ ಬಾಳಲು ಸಾಧ್ಯವೇ ಇಲ್ಲ. ಗರ್ಭದಲ್ಲಿ ಮಗು ಇದೆ. ನಾನು ಉದ್ಯೋಗಿಯಲ್ಲ. ಜೀವನಾಂಶ ಕೊಡಿಸಿ ಡೈವೋರ್ಸ್ ಕೊಡಿಸಿ ಎಂದು ಕೋರ್ಟ್‌ನಲ್ಲಿ ಹೇಳಿದೆ. ವಿಶ್ವನಾಥನೇ ತಿಳಿಸಿರಬೇಕು. ಆಗ ಅಪ್ಪಅಮ್ಮ ಬಂದಿದ್ದರು. 'ನೀನು ಡೈವೋರ್ಸ್ ತಗೊಂಡರೆ ನಮ್ಮ ಪಾಲಿಗೆ ಸತ್ತೆ' ಅಂತ ಹೇಳಿ ಹೋಗಿದ್ದರು.

ಆಗ ನಾನು ಎಂಟು ತಿಂಗಳ ಬಸುರಿ. ಅದು ನನ್ನದಲ್ಲವೇ ಅಲ್ಲ ಎಂದು ವಿಶ್ವನಾಥ ವಾದಿಸಿದ್ದ. ಕೋರ್ಟ್ ಒಪ್ಪದೆ ಹೆರಿಗೆ ಆದಮೇಲೆ ಡಿಎನ್‌ಎ ಟೆಸ್ಟ್ ಆಗಲಿ ಎಂದಿತ್ತು. ನಾನೇ ಸಹನೆ ಕೆಟ್ಟು ದೃಢವಾಗಿ